# ‘ಕನ್ನಡಪರ ಹಕ್ಕೊತ್ತಾಯಗಳ ಅನುಷ್ಠಾನ: ಸರ್ಕಾರಕ್ಕೆ ಇಚ್ಛಾಶಕ್ತಿಯೇ ಇಲ್ಲ

## ಹಾವೇರಿ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ದೊಡ್ಡರಂಗೇಗೌಡ ಸಂದರ್ಶನ

ಮಧುಗಿರಿ ತಾಲ್ಲೂಕಿನ ಕುರುಬರಹಳ್ಳಿ ದೊಡ್ಡರಂಗೇಗೌಡರ ತವರು (ಜನನ: ಫೆಬ್ರುವರಿ 7, 1946). ತಂದೆ ಕೆ. ರಂಗೇಗೌಡ, ತಾಯಿ ಅಕ್ಕಮ್ಮ. ಬೆಂಗಳೂರಿನ ಎಸ್.ಎಲ್.ಎನ್. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ದೊರಂಗೌ, ಅದೇ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದಾರೆ. ಕಾವ್ಯ, ಕಥೆ, ಸಂಶೋಧನೆ, ವಿಮರ್ಶೆ ಸೇರಿದಂತೆ ವಿವಿಧ ಪ್ರಕಾರದ 109 ಕೃತಿಗಳನ್ನು ರಚಿಸಿದ್ದಾರೆ. ಕಿರುತೆರೆ–ಬೆಳ್ಳಿತೆರೆಗೆ ನೂರಾರು ಗೀತೆಗಳನ್ನು ರಚಿಸಿದ್ದಾರೆ, ಸಂಭಾಷಣೆಯನ್ನೂ ರಚಿಸಿದ್ದಾರೆ. ಅವರ ಸಾಹಿತ್ಯದ ‘ಮಾವು ಬೇವು’ ಸಿನಿಮಾ ತೆರೆಕಾಣಲು ಸಿದ್ಧವಾಗಿದೆ. ಜನವರಿ 6ರಿಂದ 8ರವರೆಗೆ ಹಾವೇರಿಯಲ್ಲಿ ನಡೆಯುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗೌರವ ಅವರಿಗೆ ಸಂದಿದೆ. ಈ ಸಂದರ್ಭದಲ್ಲಿ ದೊರಂಗೌ ಅವರೊಂದಿಗೆ ‘ಸುಧಾ’ ನಡೆಸಿದ ವಿಶೇಷ ಸಂದರ್ಶನ ಇಲ್ಲಿದೆ.

■ **ರಾಘವೇಂದ್ರ ಕೆ. ತೊಗರ್ಸಿ**

ಚಿತ್ರಗಳು: ರಂಜು ಪಿ.



◆ **86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ನಿಮಗೆ ‘ಸುಧಾ’ ಪತ್ರಿಕೆಯ ಅಭಿನಂದನೆಗಳು. ‘ಸುಧಾ’ ಜೊತೆಗಿನ ನಿಮ್ಮ ಒಡನಾಟ ಹೇಗಿತ್ತು?**

‘ಸುಧಾ’ ಪತ್ರಿಕೆಯ ಓದುಗರಿಗೆ ನಮಸ್ಕಾರ. ‘ಪ್ರಜಾವಾಣಿ’ ಬಳಗದೊಂದಿಗೆ ನನ್ನದು ದೀರ್ಘಕಾಲದ ಒಡನಾಟ. 1971ರಲ್ಲಿ ‘ಪ್ರಜಾವಾಣಿ’ಯಲ್ಲಿ ಇಂಟರ್ನ್‌ಶಿಪ್ ಮಾಡಿ, ಮೂರ್ನಾಲ್ಕು ತಿಂಗಳು ಕೆಲಸವನ್ನೂ ಮಾಡಿದ್ದೇನೆ. ಆಗ ಟಿ.ಎಸ್. ರಾಮಚಂದ್ರ ರಾವ್ ಸಂಪಾದಕರಾಗಿದ್ದರು.

ಬಿ.ಎಸ್ಸಿ. ಮುಗಿಸಿದ ನಂತರ ರೈಲ್ವೆ ಇಲಾಖೆಯ ಮೇಲ್ ಸರ್ವೀಸ್‌ನಲ್ಲಿ ಶಾರ್ಟರ್ ಎಂಬ ಹುದ್ದೆಗೆ ಸೇರಿದ್ದೆ. ಅಲ್ಲಿ ಪತ್ರ ವಿಂಗಡಣೆ, ರಿಜಿಸ್ಟರ್ ಪೋಸ್ಟ್, ಪಾರ್ಸಲ್ ಹೀಗೆ ಎಲ್ಲ ರೀತಿಯ ಕೆಲಸ ಮಾಡಿದ್ದೇನೆ. ಹಗಲೆಲ್ಲ ಬಿಡುವಿನ ಸಮಯ ಇದ್ದಿದ್ದರಿಂದ ಬಿ.ಎ. ಆನರ್ಸ್ ಮತ್ತು ಎಂ.ಎ. ಹಾಗೂ ಒಂದು ವರ್ಷದ ಪತ್ರಿಕೋದ್ಯಮದ ಕೋರ್ಸ್ ಮಾಡಲು ಸಾಧ್ಯವಾಯಿತು.

ನನಗೆ ಸಾಹಿತ್ಯದ ಗೀಳು ಪ್ರೌಢಶಾಲೆಯಲ್ಲೇ ಆರಂಭವಾಗಿತ್ತು. ಆ ಸಂದರ್ಭದಲ್ಲಿ ಬರೆಯಲು ಆರಂಭಿಸಿದೆ. ‘ಪ್ರಜಾವಾಣಿ’ ಬಳಗದಿಂದ ತುಂಬ ಪ್ರೋತ್ಸಾಹ ಸಿಕ್ಕಿದೆ. ಅದನ್ನು ಯಾವತ್ತೂ ಸ್ಮರಿಸುತ್ತೇನೆ. ಆಗಿನ ಸಂಬಳ ತೀರಾ ಕಡಿಮೆ ಇತ್ತು. ಬರಹಗಳಿಗೆ ಪತ್ರಿಕೆಯಿಂದ ದೊರೆಯುತ್ತಿದ್ದ ಸಂಭಾವನೆಯಿಂದ ಜೀವನಕ್ಕೆ ನೆರವಾಗುತ್ತಿತ್ತು.